



ಬ್ಯಾಡಗಿಯ ಅತ್ತಿಕಟ್ಟೆ ಗ್ರಾಮದ ಅಗಸರವಡ್ಡು ಕೆರೆ ಹೂಳನ್ನು ಒಯ್ಯುತ್ತಿರುವ ರೈತರು

ಜನರ ಸಹಯೋಗದೊಂದಿಗೆ ಕೆರೆಗಳ ಪುನಶ್ಚೇತನ ಕಾರ್ಯವು ಬಿರುಸಿನಿಂದ ಶುರುವಾಯಿತು. ಶಿರಸಿ ಸುತ್ತಮುತ್ತ ಆರಂಭವಾದ ಪ್ರಯತ್ನ ಮರು ವರ್ಷದಿಂದ ಅಕ್ಕಪಕ್ಕದ ಜಿಲ್ಲೆಗಳಿಗೂ ವ್ಯಾಪಿಸಿತು.

ಅಭಿವೃದ್ಧಿಗೊಂಡ ಕೆರೆಗಳ ಪೈಕಿ ಉತ್ತರ ಕನ್ನಡ ಜಿಲ್ಲೆ 83, ಹಾವೇರಿ 105, ಶಿವಮೊಗ್ಗ 35 ಹಾಗೂ ಧಾರವಾಡ ಜಿಲ್ಲೆಯ 58 ಕೆರೆಗಳು ಸೇರಿವೆ. ಒಟ್ಟು 10 ತಾಲ್ಲೂಕುಗಳಲ್ಲಿ ಕೆರೆ ಕಾಮಗಾರಿ ನಡೆದಿದೆ. ತಾಲ್ಲೂಕುವಾರು ನೋಡುವುದಾದರೆ ಹಾನಗಲ್‌ನಲ್ಲಿ ಅತಿ ಹೆಚ್ಚು, ಅಂದರೆ 72 ಕೆರೆಗಳು, ಶಿರಸಿಯಲ್ಲಿ 56, ಕಲಘಟಗಿಯಲ್ಲಿ 53, ಸೊರಬದಲ್ಲಿ 34, ಮುಂಡಗೋಡದಲ್ಲಿ 27, ಬ್ಯಾಡಗಿಯಲ್ಲಿ 19 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಉಳಿದಂತೆ ಶಿಗ್ಗಾವಿಯಲ್ಲಿ 9, ಹಿರೇಕೆರೂರಿನಲ್ಲಿ 3, ಹುಬ್ಬಳ್ಳಿ ಮತ್ತು ಕುಂದಗೋಳಗಳಲ್ಲಿ ತಲಾ 2 ಮತ್ತು ಧಾರವಾಡದಲ್ಲಿ ಒಂದು ಕೆರೆ ಪುನಶ್ಚೇತನಗೊಂಡಿವೆ.

2023–24ನೇ ಸಾಲಿನಲ್ಲಿ 57 ಕೆರೆಗಳನ್ನು ಅಭಿವೃದ್ಧಿಪಡಿಸಿರುವುದು ದಾಖಲೆ. ಕೆರೆ ಪುನರುಜ್ಜೀವನಕ್ಕೆ ತಗಲುವ ಒಟ್ಟು ವೆಚ್ಚದ ಶೇ. 60ಕ್ಕಿಂತ ಅಧಿಕ ಮೊತ್ತವನ್ನು ಜನರೇ ಭರಿಸುತ್ತಿದ್ದಾರೆ. ಮನುವಿಕಾಸ ಅನುಭವದ ಪ್ರಕಾರ ಮಧ್ಯಮ ಗಾತ್ರದ ಕೆರೆಯೊಂದರ ಪುನಶ್ಚೇತನಕ್ಕೆ ಅಂದಾಜು 6 ಲಕ್ಷ ರೂ. ತಗಲುತ್ತದೆ. ಈ ಮೊತ್ತದಲ್ಲಿ ಶೇ. 60ಕ್ಕಿಂತ ಹೆಚ್ಚಿನ ಪಾಲು ಟ್ರ್ಯಾಕ್ಟರ್ ಬಾಡಿಗೆ ಅಥವಾ ಇಂಧನಕ್ಕೆ ಖರ್ಚಾಗುತ್ತದೆ. ಈ ಮೊತ್ತವನ್ನು ಆಯಾ ರೈತರೇ ಭರಿಸುತ್ತಿದ್ದಾರೆ.

ಕೆರೆ ಅಭಿವೃದ್ಧಿಗೆ ಸಂಸ್ಥೆ ಅಳವಡಿಸಿಕೊಂಡಿರುವ ಕಾರ್ಯತಂತ್ರ ಸರಳ ಮತ್ತು ಪರಿಣಾಮಕಾರಿ. ಮೊದಲು ಗ್ರಾಮ ಪಂಚಾಯ್ತಿಯನ್ನು ಸಂಪರ್ಕಿಸಿ ಕೆರೆಯ ಮಾಹಿತಿ ಹಾಗೂ ಅನುಮತಿ ಪಡೆಯಲಾಗುತ್ತದೆ. ನಂತರ ಗ್ರಾಮದಲ್ಲಿ ಸರಣಿ ಸಭೆ ನಡೆಸಿ ಹಿರಿಯರು, ಮಹಿಳೆಯರು ಹಾಗೂ ಯುವಕರನ್ನೊಳಗೊಂಡ ‘ಕೆರೆ ಅಭಿವೃದ್ಧಿ ಸಮಿತಿ’ ರಚಿಸಲಾಗುತ್ತದೆ. ಕೆರೆಯ ನಕ್ಷೆ, ಅಚ್ಚುಕಟ್ಟು ಪ್ರದೇಶ, ಹೂಳಿನ ಪ್ರಮಾಣ, ಒತ್ತುವರಿ ಮಾಹಿತಿಗಳನ್ನು ಸಮಿತಿಯು ಸಂಗ್ರಹಿಸಬೇಕು.

ಸಂಸ್ಥೆಯು ಹೂಳಿನ ಪರೀಕ್ಷೆ ಮಾಡಿಸಿ ಅದು ಕೃಷಿಗೆ ಯೋಗ್ಯವಿದೆಯೋ ಇಲ್ಲವೋ ಎಂಬುದನ್ನು ತಿಳಿಸುತ್ತದೆ. ಇಷ್ಟಾದ ಬಳಿಕ ಕೆರೆಯಲ್ಲಿ ಹೂಳು ತೆಗೆಯಲು ದಿನ ನಿಗದಿ. ಸಮಿತಿಯು ಸ್ಥಳೀಯ ಚುನಾಯಿತ ಸದಸ್ಯರಿಗೆ ಮಾಹಿತಿ